# ಬಟ್ಟೆಗಳು ಆಧ್ಯಾತ್ಮಿಕ ದೃಷ್ಟಿಯಿಂದ ಹೇಗಿರಬೇಕು ?

## ಮನೋಗತ

'ವಿಕೃತವಾಸೋ ನ ಆಚ್ಛಾದನೀಯಮ್ ।', ಎಂದು ಹೇಳುತ್ತಾರೆ. ಇದರ ಅರ್ಥ ವೇನೆಂದರೆ ಮನುಷ್ಯನು ವಿಕೃತ ವೇಷವನ್ನು ಮಾಡಬಾರದು. ಹೆಚ್ಚಿನ ಸಮಯ ಮನುಷ್ಯರ ವೇಷವು ಅವರು ಧರಿಸಿದ ಬಟ್ಟೆಗಳ ಮೇಲೆ ಅವಲಂಬಿಸಿರುತ್ತದೆ. ಇತ್ತೀಚಿನ ತರುಣರು 'ಫ್ಯಾಶನ್ನಿ'ನ ಹೆಸರಿನಲ್ಲಿ ಚಿತ್ರವಿಚಿತ್ರ ಆಕೃತಿಗಳಿರುವ, ವಿಚಿತ್ರ ಬಣ್ಣಗಳ, ಜೀನ್ಸ್–ಸ್ಟ್ರೆಚೇಬಲ್ಸ್‌ನಂತಹ ಬಿಗಿಯಾದ, ಶರೀರವನ್ನು ಪ್ರದರ್ಶಿಸುವ, ಇಂತಹ ಅನೇಕ ರೀತಿಯ ಬಟ್ಟೆಗಳನ್ನು ಉಪಯೋಗಿಸುತ್ತಿದ್ದಾರೆ. ಇವು ವಿಕೃತ ವೇಷಭೂಷಣಗಳಾಗಿವೆ. ವಿಕೃತ ವೇಷಭೂಷಣಗಳೆಂದರೆ ರಜ–ತಮಾತ್ಮಕ ಸ್ಪಂದನಗಳನ್ನು ನಿರ್ಮಿಸುವ ವೇಷ ಭೂಷಣಗಳು. ಇಂತಹ ವೇಷಭೂಷಣಗಳಿಂದ ಮನುಷ್ಯನ ಬುದ್ಧಿಯು ವಿಕೃತವಾಗು ತ್ತದೆ, ಅವನು ಅನೇಕ ದುಷ್ಪ್ರವೃತ್ತಿಗಳ ಗುಲಾಮನಾಗುತ್ತಾನೆ, ಕಾಮ–ಕ್ರೋಧಾದಿ ಗಳಂತಹ ಷಡ್ವೈರಿಗಳ ಅಧೀನನಾಗುತ್ತಾನೆ ಮತ್ತು ಕೆಟ್ಟ ಶಕ್ತಿಗಳ ಹಲ್ಲೆಗಳಿಗೆ ಬಲಿಯಾಗುತ್ತಾನೆ. ಇದಕ್ಕೆ ವಿರುದ್ಧವಾಗಿ ಮನುಷ್ಯನು ಸಾತ್ತ್ವಿಕ ಬಟ್ಟೆಗಳನ್ನು ಧರಿಸುವುದ ರಿಂದ ಅವನಿಗೆ ಈಶ್ವರನ ಚೈತನ್ಯವನ್ನು ಆಕರ್ಷಿಸಲು ಸಾಧ್ಯವಾಗುವುದರಿಂದ ಅವನ ಮನಸ್ಸು ಮತ್ತು ಬುದ್ಧಿಯು ಸಾತ್ತ್ವಿಕವಾಗುತ್ತವೆ. ಅವನು ಸದಾಚಾರಿ ಮತ್ತು ವಿವೇಕಿ ಯಾಗುವುದರ ಜೊತೆಗೆ ಕೆಟ್ಟ ಶಕ್ತಿಗಳ ಹಲ್ಲೆಗಳಿಂದ ರಕ್ಷಣೆಯಾಗಲು ಸಹಾಯವಾಗುತ್ತದೆ.

ಪ್ರತಿಯೊಂದು ವಸ್ತುವಿಗೆ ಅದರ ಗುಣಧರ್ಮಕ್ಕನುಸಾರ ಸ್ಪಂದನಗಳಿರುತ್ತವೆ. ಬಟ್ಟೆಯ ವಿಧ, ಬಣ್ಣ, ವಿನ್ಯಾಸ, ಬಟ್ಟೆಗಳ ಹೊಲಿಗೆ, ಆಕಾರ ಮುಂತಾದ ವಿಷಯಗಳ ಮೇಲೆ ಬಟ್ಟೆಯ ಸ್ಪಂದನಗಳು ಅವಲಂಬಿಸಿರುತ್ತವೆ. ಈ ವಿಷಯಗಳು ಎಷ್ಟು ಸಾತ್ತ್ವಿಕವಾಗಿರುತ್ತವೆಯೋ, ಬಟ್ಟೆಗಳೂ ಅಷ್ಟೇ ಸಾತ್ತ್ವಿಕವಾಗುತ್ತವೆ. ಈ ವಿಷಯಗಳು ಸಾತ್ತ್ವಿಕವಾಗಿರಬೇಕು ಅಂದರೆ ಹೇಗಿರಬೇಕು ಎಂಬುದನ್ನು ಈ ಗ್ರಂಥದಲ್ಲಿ ನೀಡಲಾಗಿದೆ. ನೈಲಾನ್, ಟೆರಿಕಾಟ್ ಮುಂತಾದ ಕೃತ್ರಿಮ ದಾರಗಳಿಂದ ತಯಾರಿಸಿದ ಬಟ್ಟೆಗಳಿಗಿಂತ ಹತ್ತಿ, ರೇಷ್ಮೆಯಂತಹ ನೈಸರ್ಗಿಕ ದಾರಗಳಿಂದ ತಯಾರಿಸಿದ ಬಟ್ಟೆಗಳನ್ನು ಏಕೆ ಉಪಯೋಗಿಸಬೇಕು, ಸಾತ್ತ್ವಿಕ ಬಣ್ಣಗಳು ಯಾವುವು, ವಿನ್ಯಾಸಗಳಿಲ್ಲದ ಬಟ್ಟೆಗಳು ಏಕೆ ಹೆಚ್ಚು ಯೋಗ್ಯವಾಗಿವೆ, ಬಟ್ಟೆಗಳ ಶುದ್ಧೀಕರಣವು ಏಕೆ ಆವಶ್ಯಕವಾಗಿದೆ ಇಂತಹ ಅನೇಕ ಪ್ರಶ್ನೆಗಳ ಉತ್ತರಗಳಿಂದ ಬಟ್ಟೆಗಳ ಹಿಂದಿನ ಅಧ್ಯಾತ್ಮಶಾಸ್ತ್ರದ ದೃಷ್ಟಿಕೋನವು ಸ್ಪಷ್ಟವಾಗಲು ಸಹಾಯವಾಗುವುದು. ಸಾತ್ತ್ವಿಕ ಬಟ್ಟೆಗಳನ್ನು ಆರಿಸುವಾಗ ನಮ್ಮ ಇಷ್ಟಾನಿಷ್ಟಗಳಿಗಿಂತ ಸ್ಪಂದನಶಾಸ್ತ್ರದ ಅಧ್ಯಯನವು ಹೆಚ್ಚು ಉಪಯುಕ್ತವಾಗಿದೆ. ಅದು ಹೇಗಿರಬೇಕು ಎಂಬುದರ ಅಲ್ಪ ಪರಿಚಯವೂ ಈ ಗ್ರಂಥದಲ್ಲಿ ನೀಡಿದ ಕೆಲವು ಸೂಕ್ಷ್ಮ ಪ್ರಯೋಗಗಳಿಂದ ಸಿಗುವುದು.

ಸಾಮಾನ್ಯ ಮನುಷ್ಯರು ಚೈತನ್ಯವನ್ನು ಆಕರ್ಷಿಸುವ ದೃಷ್ಟಿಯಿಂದ ಸಾತ್ತ್ವಿಕ

ಬಟ್ಟೆಗಳನ್ನೇ ಧರಿಸಬೇಕು. ಯಾರಾದರೊಬ್ಬ ವ್ಯಕ್ತಿಯಲ್ಲಿ ಭಾವವಿದ್ದರೆ, ಅವನ ವೃತ್ತಿಯು ಸಾತ್ತ್ವಿಕವಾಗಿರುತ್ತದೆ ಮತ್ತು ಅವನಿಂದಾಗುವ ಭಾವಯುಕ್ತ ಕೃತಿಯಿಂದ ಅವನಿಗೆ ಈಶ್ವರನ ಚೈತನ್ಯವನ್ನು ಸಹಜವಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಹಾಗೆಯೇ ಶೇ. ೬೦ ಕ್ಕಿಂತ ಹೆಚ್ಚು ಆಧ್ಯಾತ್ಮಿಕ ಮಟ್ಟವಿರುವ ಮತ್ತು ದೇಹಬುದ್ಧಿಯು ಕಡಿಮೆಯಾಗಿರುವ ಸಾಧಕರ ಪ್ರವಾಸವು ಈಶ್ವರಪ್ರಾಪ್ತಿಯ ದಿಶೆಯಲ್ಲಿ ಶೀಘ್ರಗತಿಯಲ್ಲಿ ಆಗುತ್ತಿರುತ್ತದೆ. ಇಂತಹ ಸಾಧಕರು ಎಂತಹ ಬಟ್ಟೆಗಳನ್ನು ಧರಿಸಬೇಕು ಎಂಬುದಕ್ಕೆ ಹೆಚ್ಚಿನ ಮಹತ್ವವಿರುವುದಿಲ್ಲ; ಹೀಗಿದ್ದರೂ ಅವರು ಸಾತ್ತ್ವಿಕ ಬಟ್ಟೆಗಳನ್ನು ಧರಿಸಿದರೆ ಅವರ ಸಾತ್ತ್ವಿಕತೆಯು ಖಂಡಿತವಾಗಿಯೂ ಹೆಚ್ಚಾಗುತ್ತದೆ, ಮಾತ್ರವಲ್ಲದೇ ಈ ಸಾತ್ತ್ವಿಕತೆಯಿಂದ ಸಮಷ್ಟಿಗೂ ದೊಡ್ಡ ಲಾಭವಾಗುತ್ತದೆ. ಸಾತ್ತ್ವಿಕ ಬಟ್ಟೆಗಳಿಂದ ಮಕ್ಕಳ ಮೇಲೆ ಒಳ್ಳೆಯ ಸಂಸ್ಕಾರಗಳಾಗಲೂ ಸಹಾಯವಾಗುತ್ತದೆ. ಆದುದರಿಂದ ಅವರು ಸಾತ್ತ್ವಿಕ ಬಟ್ಟೆಗಳನ್ನು ಧರಿಸುವುದು ಎಂದಿಗೂ ಕಲ್ಯಾಣಕಾರಿಯೇ ಆಗಿದೆ.

ಸಾತ್ತ್ವಿಕ ಬಟ್ಟೆಗಳ ಹಿಂದಿನ ದೃಷ್ಟಿಕೋನವನ್ನು ತಿಳಿದುಕೊಂಡು ಅದನ್ನು ಆಚರಣೆಯಲ್ಲಿ ತರಲು ಹೆಚ್ಚಿನ ಜನರಿಗೆ ಪ್ರೇರಣೆಯಾಗಲಿ ಮತ್ತು ಅವರ ಸಾತ್ತ್ವಿಕತೆಯು ಹೆಚ್ಚಾಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. – ಸಂಕಲನಕಾರರು


## ಆಧ್ಯಾತ್ಮಿಕ ದೃಷ್ಟಿಯಿಂದ ಉಡುಪುಗಳ ಶಾಸ್ತ್ರ ಹೇಳುವ ಗ್ರಂಥ

### ಸ್ತ್ರೀಯರಿಗೆ ಆಧ್ಯಾತ್ಮಿಕ ದೃಷ್ಟಿಯಿಂದ ಉಪಯುಕ್ತ ಉಡುಪುಗಳು

- ಸ್ತ್ರೀಯರು ತುಂಡುಡುಗೆಯನ್ನು ಏಕೆ ಧರಿಸಬಾರದು ?
- ಸಲ್ವಾರ್–ಕುರ್ತಾಗಿಂತ ಸೀರೆ ಏಕೆ ಹೆಚ್ಚು ಯೋಗ್ಯವಾಗಿದೆ ?
- ೬ ಕ್ಕಿಂತ ೯ ಗಜದ ಸೀರೆ ಏಕೆ ಹೆಚ್ಚು ಯೋಗ್ಯ ?
- ಶಾಸ್ತ್ರೀಯ ದೃಷ್ಟಿಯಿಂದ ಸೀರೆಯನ್ನು ಉಟ್ಟುಕೊಳ್ಳುವ ಯೋಗ್ಯ ಪದ್ಧತಿ ಯಾವುದು ?




ಅಧ್ಯಾತ್ಮ ! ಆಧುನಿಕ ವಿಜ್ಞಾನಕ್ಕೆ ಇದರ ಬಗ್ಗೆ ಏನೂ ತಿಳಿದಿಲ್ಲ. ಆದರೆ ಅಧ್ಯಾತ್ಮ ಶಾಸ್ತ್ರವು ಇದರ ಬಗ್ಗೆ ಎಲ್ಲವನ್ನೂ ಹೇಳುತ್ತದೆ. – **(ಪರಾತ್ಪರ ಗುರು) ಡಾ. ಆಠವಲೆ**

**ಅನುಕ್ರಮಣಿಕೆ**

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


**೧. ಬಟ್ಟೆಗಳನ್ನು ಧರಿಸುವುದರ ಮಹತ್ವ ಮತ್ತು ಲಾಭಗಳು ೧೭**

**೨. ಬಟ್ಟೆಗಳ ಸಾತ್ತ್ವಿಕತೆಗೆ ಆವಶ್ಯಕವಿರುವ ಘಟಕಗಳು ಮತ್ತು ಅವುಗಳ ಮಹತ್ವ ೨೨**

**೩. ಬಟ್ಟೆಗಳ ವಿಧಗಳು ೨೩**

* ಕೃತಕ ದಾರಗಳಿಂದ ತಯಾರಿಸಿದ ಬಟ್ಟೆಗಳ ಬದಲು ನೈಸರ್ಗಿಕ ದಾರಗಳಿಂದ ತಯಾರಿಸಿದ ಬಟ್ಟೆಗಳನ್ನು ಏಕೆ ಬಳಸಬೇಕು ? ೩೬

**೪. ಬಟ್ಟೆಯ ಬಣ್ಣ ೪೩**

* ಬಟ್ಟೆಗಳ ಬಣ್ಣದ ಆಯ್ಕೆಯ ಹಿಂದಿನ ಸಾಮಾನ್ಯ ಆಧ್ಯಾತ್ಮಿಕ ದೃಷ್ಟಿಕೋನ ೪೮

* ಹಿಂದೂ ಧರ್ಮದಲ್ಲಿ ಕಪ್ಪು ಬಣ್ಣವನ್ನು ನಿಷೇಧಿಸಲಾಗಿದೆ ೫೩

**೫. ಬಟ್ಟೆಯ ಮೇಲಿರುವ ವಿನ್ಯಾಸ ೬೩**

* ಬಟ್ಟೆಗಳ ಮೇಲಿನ ವಿನ್ಯಾಸವು ಸಾತ್ತ್ವಿಕತೆಯ ದೃಷ್ಟಿಯಿಂದ ಹೇಗಿರಬೇಕು? ೬೪

**೬. ಬಟ್ಟೆಗಳನ್ನು ಹೊಲಿಯುವ ಪದ್ಧತಿ ೬೭**

* ಹಿಂದಿನ ಕಾಲದ ಗಂಟು ಹಾಕುವ ಬಟ್ಟೆಗಳನ್ನು ಧರಿಸುವ ಯೋಗ್ಯ ಪದ್ಧತಿ ೬೭

* ಉಡುಪುಗಳಿಗೆ ಆದಷ್ಟು ಕಡಿಮೆ ಹೊಲಿಗೆಗಳು ಏಕಿರಬೇಕು ? ೬೮

**೭. ಬಟ್ಟೆಗಳನ್ನು ಉಪಯೋಗಿಸುವ ಸಂದರ್ಭದಲ್ಲಿ ಕೆಲವು ವ್ಯಾವಹಾರಿಕ ಸೂಚನೆಗಳು ೭೧**

* ಹರಿದ ಅಥವಾ ಹೊಲಿಗೆ ಬಿಚ್ಚಿದ ಬಟ್ಟೆಗಳನ್ನು ಏಕೆ ಉಪಯೋಗಿಸಬಾರದು ? ೭೩

* ಇತರರು ಉಪಯೋಗಿಸಿದ ಬಟ್ಟೆಗಳನ್ನು ಏಕೆ ಉಪಯೋಗಿಸಬಾರದು ? ೭೪

* ಉನ್ನತರು ಉಪಯೋಗಿಸಿದ ಬಟ್ಟೆಗಳನ್ನು ಉಪಯೋಗಿಸುವುದರ ಲಾಭಗಳು ೭೪

**೮. ಭಾವವಿರುವವರು, ಒಳ್ಳೆಯ ಆಧ್ಯಾತ್ಮಿಕ ಮಟ್ಟವಿರುವವರು, ಸಂತರು ಮತ್ತು ಗುರುಕೃಪಾಯೋಗಾನುಸಾರ ಸಾಧನೆ ಮಾಡುವವರು ಬಾಹ್ಯ ವೇಷಭೂಷಣಗಳಿಗೆ ಮಹತ್ವ ಕೊಡುವ ಆವಶ್ಯಕತೆಯಿಲ್ಲ ೮೧**